# ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

## CC No 1310/2017

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಕಾಶ್ ಬಿ ಕೆ |
| ತಂದೆಯ ಹೆಸರು | : | ಕೆಂಚಪ್ಪ ಗೌಡ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಸಿ ಪಿ ಐ, ಚನ್ನಪಟ್ಟಣ ಗ್ರಾಮಾಂತರ ವೃತ್ತ, ಚನ್ನಪಟ್ಟಣ |
| ವಾಸಸ್ಥಳ | : | ಚನ್ನಪಟ್ಟಣ |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 07.03.2026

---

ನಾನು ದಿಃ 20.06.2016 ರಿಂದ 13.10.2017 ರವರೆಗೆ ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19.05.2017 ರಂದು ಎಂ ಕೆ ದೊಡ್ಡಿ ಪೊಲೀಸ್ ಠಾಣೆಯ ಸರಹದ್ದಿನ ಗುಡ್ಡೆ ತಿಮ್ಮಸಂದ್ರದ ವಾಸಿ ಕೃಷ್ಣ ಎಂಬುವವರು ವಿದ್ಯುತ್ ಹರಿದು ಮೃತಪಟ್ಟಿದ್ದು ಇದರ ಸಂಬಂಧ ಸರ್ಕಾರದಿಂದ ಪರಿಹಾರವನ್ನು ಪಡೆಯುವ ಸಲುವಾಗಿ ಸಂಜೆ 4-45 ಗಂಟೆಗೆ ಚನ್ನಪಟ್ಟಣ ಟೌನ್ 8ನೇ ಕ್ರಾಸ್ ನಲ್ಲಿ ಜಯಮುತ್ತು, ರಾಜಣ್ಣ, ಅಭಿಷೇಕ್, ವೆಂಕಟೇಶ್, ನಿಂಗರಾಜು, ಮಂಜು ಹಾಗೂ ಇತರರು ಅಕ್ರಮ ಕೂಟ ಕಟ್ಟಿಕೊಂಡು ಬೆಂಗಳೂರು ಮೈಸೂರು ರಸ್ತೆಯನ್ನು ತಡೆದು ಹಾಗೂ ಚಲಿಸುತ್ತಿದ್ದ

ವಾಹನಗಳನ್ನು ಅಡ್ಡಗಟ್ಟಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದು, ಇದರ ಸಂಬಂಧ ಸದರಿಯವರಿಗೆ ನಾವು ತಿಳಿ ಹೇಳಿದ್ದು ಆದರೂ ಕೂಡ ಅಕ್ರಮ ಕೂಟ ಕಟ್ಟಿಕೊಂಡು ಬೆಂಗಳೂರು ಮೈಸೂರು ರಸ್ತೆಯಲ್ಲಿ ಚಲಿಸುತ್ತಿದ್ದ ವಾಹನಗಳನ್ನು ಅಡ್ಡಗಟ್ಟಿ ಸಾರ್ವಜನಿಕರಿಗೆ ತೊಂದರೆ ಉಂಟುಪಡಿಸಿರುತ್ತಾರೆ. ಈ ಸಂಬಂಧ ನಾನು ನಮ್ಮ ಠಾಣಾ ಎಸ್ ಹೆಚ್ ಒ ಚಾಸಾ-10ರವರಿಗೆ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಸದರಿ ಪಿರ್ಯಾದು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಅದೇ ದಿನ ರಾತ್ರಿ 7-30 ರಿಂದ 8-00 ಗಂಟೆವರೆಗೂ ಘಟನೆ ನಡೆದ ಸ್ಥಳದಲ್ಲಿ ಚಾಸಾ-7 ಮತ್ತು 9 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸ್ಥಳ ಮಹಜರ್ ನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-2 ರಿಂದ 8ರವರ ಹೇಳಿಕೆಗಳನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿರುತ್ತೇನೆ. ಚಾಸಾ-10ರವರು ಭಾಗಶಃ ತನಿಖೆ ಮಾಡಿದ್ದು, ಅವರಿಂದ ಕೇಸಿನ ಕಡತ ಪಡೆದು ತನಿಖೆ ಕೈಗೊಂಡು ಕೇಸಿನ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಬಿ ಜಿ ವಕೀಲರಿಂದಃ**

ಗುಡ್ಡೆ ತಿಮ್ಮಸಂದ್ರ ಗ್ರಾಮದಿಂದ ಕೆಇಬಿ ಕಛೇರಿ ಚನ್ನಪಟ್ಟಣ ಇಲ್ಲಿಗೆ ಹೋಗಲು ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ಸಾಗಬೇಕು ಎಂದರೆ ಸರಿ. ಸಾರ್ವಜನಿಕ ಆಸ್ಪತ್ರೆ ಚನ್ನಪಟ್ಟಣ ಇಲ್ಲಿಗೆ ಸಾಗಲು ಅದೇ ಮೈಸೂರು

ಬೆಂಗಳೂರು ಹೆದ್ದಾರಿಯಲ್ಲಿ ಸಾಗಬೇಕು ಎಂದರೆ ಸರಿ. ನಾನು ನಿವೇದನೆಯಲ್ಲಿ ನಿವೇದಿಸಿಕೊಂಡಿರುವ ಹಾಗೆ ಸಂಜೆ 4-45 ರಿಂದ 6-30ರವರೆಗೆ ರಸ್ತೆ ತಡೆ ಆಗಿರುತ್ತದೆ ಎಂದರೆ ಸರಿ. ರಸ್ತೆ ತಡೆ ಮಾಡಿದ ಬಗ್ಗೆ ತಾವು ತಮ್ಮ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದ್ದರಾ ಎಂದರೆ ಹೌದು ತಿಳಿಸಿದ್ದೇವು ಎನ್ನುತ್ತಾರೆ. ಸಾರ್ವಜನಿಕರು ಆರೋಪಿಯ ನೇತೃತ್ವದಲ್ಲಿ ರಸ್ತೆ ತಡೆ ಮಾಡಿರುತ್ತಾರೆ ಎಂದು ತಾವು ಹೇಳಿದ್ದು ಆ ಸಂದರ್ಭದಲ್ಲಿ ತಾವು ವಿಡಿಯೋ ಚಿತ್ರೀಕರಣ ಅಥವಾ ಫೋಟೋ ಸೆರೆ ಮಾಡಿದ್ರ ಎಂದರೆ ಇಲ್ಲ ಎನ್ನುತ್ತಾರೆ.

ನಾನು ಮಹಜರ್ ನಲ್ಲಿ ತಪ್ಪು ಚೆಕ್ಕುಬಂದಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್ ನಮೂದು ಮಾಡಿರುವ ಉತ್ತರ ದಿಕ್ಕಿಗೆ ಯಾವುದೇ ಕಾಂಡಿಮೆಂಟ್ಸ್ ಶಾಪ್ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ಮಹಜರ್ ನ್ನು ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ತಯಾರು ಮಾಡಿಲ್ಲ ಠಾಣೆಯಲ್ಲಿ ಮಾಡಿ ಕೇಸಿಗೆ ಅಳವಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮುಖಂಡತ್ವದಲ್ಲಿ ದಿನಾಂಕ 19.05.2017ರಂದು ಯಾವುದೇ ರಸ್ತೆ ತಡೆ ಆಗಿಲ್ಲ ಬದಲಾಗಿ ಗುಡ್ಡೆ ತಿಮ್ಮಸಂದ್ರದ ಕೃಷ್ಣ ಎಂಬುವವನು ವಿದ್ಯುತ್ ನಿಂದ ಮೃತಪಟ್ಟಿದ್ದು ಅವನ ಶವ ತನಿಖೆಗೆ ಅವನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಅಕ್ರಮ ಕೂಟ ಕಟ್ಟಿಕೊಂಡು ರಸ್ತೆ ತಡೆ ಮಾಡಿಲ್ಲ ಸಾರ್ವಜನಿಕರಿಗೆ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ.

CW-1/ PW-5

ನಮ್ಮ ಠಾಣೆಯ ಅಂಕಿ ಅಂಶ ತೋರಿಸಲು ಆರೋಪಿ ವಿರುದ್ದ ಸುಳ್ಳು ದೂರು ಹಾಕಿ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು
ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.